# ಕರ್ನಾಟಕದ ಜಾನಪದ ನಂಬಿಕೆಗಳು

**ಜೆ. ರಾಜ ಗುಂಡಾಪುರ**

ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ, ಸರ್ಕಾರಿ ಪ್ರಥಮದರ್ಜೆ ಕಾಲೇಜು, ರಾಮನಗರ.

**Received: 24-11-2023 ; Acepted: 24-03-2024 ; Published: 13-08-2024**

**DOI: https://doi.org/10.5281/zenodo.13294367**

**ABSTRACT:**

ಜನರಿಗೆ ಸಂಬಂಧಿಸಿದ್ದು ಜನಪದ ಎಂದು ಸರಳವಾಗಿ ಹೇಳಬಹುದು. ಜೀವಕೋಟಿಯ ನಿರ್ದಿಷ್ಟ ಜನ ಸಮುದಾಯ ತನ್ನ ಉಳಿವಿಗೆ, ಸಂಸಾರಕ್ಕೆ , ಸಮಾಜಕ್ಕೆ , ಬದುಕಿಗೆ, ಸಾವಿಗೆ, ಹುಟ್ಟಿನಿಂದ ಅಂತ್ಯವರಿಗೂ ಕೆಲವು ಸಂಪ್ರದಾಯ ರೀತಿ ನೀತಿ, ಆಚಾರ-ವಿಚಾರ, ಆಚರಣೆ ಆಲೋಚನೆ ಮೊದಲಾದವುಗಳನ್ನು ರೂಢಿಗೆ ತಂದಿತ್ತು. ಇದೆಲ್ಲ ಜನಪದದ ಅಂಗವಾಯಿತು. ಜನರು ಮತ್ತು ಜನರಬದುಕು ಜನಪದವಾಯಿತು. ಜನಪದ ಶಬ್ದವು ಜನ, ಜನರ ಭಾಷೆ, ಅವರು ನೆಲೆಸಿರುವ ಸ್ಥಳ, ಜಾತಿ-ಪಂಗಡ, ಆಚಾರ-ವಿಚಾರ, ಕಲೆ, ಸಾಹಿತ್ಯ ಮೊದಲಾದವುಗಳೆಲ್ಲವನ್ನು ಒಳಗೊಂಡಿದೆ. ಆಚಾರ ವಿಚಾರಗಳಲ್ಲಿ ಏಕ ರೀತಿಯ ಗುಣಲಕ್ಷಣವಿರುವ, ಭೌತಿಕ ಹಾಗೂ ಭಾವನೆಗಳಲ್ಲಿ ಸಮಾನತೆ ಕಾಣುವ ಜನರ ಗುಂಪನ್ನು ಜನಪದ ಎಂದಿದ್ದಾರೆ. ಪರಂಪರೆಯತ್ತ ಮುಖ ಮಾಡಿರುವ ಯಾವುದೇ ಜನಸಮುದಾಯ ಜನಪದರು ಎನಿಸಿಕೊಳ್ಳುತ್ತಾರೆ.

ಜನಪದಕ್ಕೆ ಸಂಬಂಧಿಸಿದ್ದು ಜನಪದ, ಸಮಸ್ತವನ್ನು ಒಳಗೊಂಡಿದ್ದು ಜಾನಪದ. ಸಂಸ್ಕೃತಿ ಜನರಿಂದ ಜನರಿಗೆ, ತಲೆಮಾರಿನಿಂದ ತಲೆಮಾರಿಗೆ ಸಾಗುತ್ತಾ ಬಂದಿದೆ. ಇಂಗ್ಲಿಷ್ ಭಾಷೆಯಲ್ಲಿ 'Floklore' ಎಂದು ಬಳಸುತ್ತಿರುವ ಶಬ್ದಕ್ಕೆ ಸಮನಾರ್ಥಕವಾಗಿ 'ಜಾನಪದ' ಪದ ಬಳಕೆಯಾಗುತ್ತಿದೆ. 'Floklore' ಪದಕ್ಕೆ ಪ್ರಾಚೀನ ಕಾಲದ, ಪ್ರಾಚೀನ ಜನರ ಸಮಸ್ತ ಸಂಸ್ಕೃತಿಯ ಸಾರರೂಪವೇ ಜಾನಪದ. ಅದರ ಅಭ್ಯಾಸವೇ ಜಾನಪದದ ಅಭ್ಯಾಸ, ಜಾನಪದ ಅಭ್ಯಾಸವೆಂದರೆ ಮನುಕುಲದ ಸಾಂಸ್ಕೃತಿಕ ಪರಂಪರೆಯ ಅಭ್ಯಾಸವೆಂದೇ ಅರ್ಥ.

**KEYWORDS:**

ಜನಪದ, ನಂಬಿಕೆ, ಮೂಢನಂಬಿಕೆಗಳು, ತೊಟ್ಟಿಲುಶಾಸ್ತ್ರ, ಸಾಂಸ್ಕೃತಿಕ, ವೈಚಾರಿಕ, ಪರಂಪರೆ.

**ಜನಪದ ನಂಬಿಕೆಗಳು:** ನಂಬಿಕೆಗಳಿಲ್ಲದೆ ಜನಜೀವನದ ಬದುಕು ನಡೆಯುವುದಿಲ್ಲ. ಜನಪದರು[1] ತಮ್ಮ ಜೀವನದುದ್ದಕ್ಕೂ ಅನೇಕ ನಂಬಿಕೆಗಳನ್ನು ಇಟ್ಟುಕೊಂಡು ಅದರಂತೆ ಬದುಕುತ್ತಾ ಬಂದಿದ್ದಾರೆ. ನಂಬಿಕೆಗಳಿಗೆ ದೇಶ, ಭಾಷೆಯೆಂಬುದಿಲ್ಲ, ಜನರಿರುವೆಡೆಯಲ್ಲಾ ನಂಬಿಕೆಗಳಿವೆ. ನಂಬಿಕೆಗಳೆಂದರೆ ವ್ಯಕ್ತಿ ಹಾಗೂ ಸಮಾಜ ಪರಂಪರಾಗತವಾಗಿ ಒಪ್ಪಿಕೊಂಡು ಪ್ರಜ್ಞಾಪೂರ್ವಕವಾಗಿ ಅನುಸರಿಸುತ್ತಾ ಬರುತ್ತಿರುವ ವರ್ತನೆಗಳ ಮೊತ್ತ ಎನ್ನಬಹುದು. ನಂಬಿಕೆಗಳ ಒಳಹೊಕ್ಕು ನೋಡಿದರೆ ಕಾಣುವುದು

ಬುದ್ಧಿ ಒಕ್ಕಾಲು, ಭಾವ ಮುಕ್ಕಾಲು. ಅಂದರೆ ವೈಚಾರಿಕ ದೃಷ್ಟಿಗಿಂತ ಭಾವುಕದ ದೃಷ್ಟಿ ಅಧಿಕ. ಹಲವು ನಂಬಿಕೆಗಳ ಅನುಸರಣೆಯಿಂದ ಮಾನಸಿಕ ಶಾಂತಿಯೂ ಅವುಗಳ ನಿರಾಕರಣೆಯಿಂದ ಅಶಾಂತಿಯೂ ಮೂಡುವುದರಿಂದ ನಂಬಿಕೆಗಳು ಅಭಾಧಿತವಾಗಿ ಸಾಗುತ್ತಾ ಬಂದು ಜನಜೀವನದ ಮೇಲೆ ಪ್ರಭುತ್ವ ಸಾಧಿಸಿವೆ.

**ನಂಬಿಕೆಗಳಿಗೆ ಕಾರಣಗಳು:** ನಂಬಿಕೆಗಳ ಉಗಮ ಮತ್ತು ವಿಕಾಸ, ಪ್ರಸಾರಗಳ ಬಗ್ಗೆ ಆಲೋಚಿಸಿದರೆ ಅನೇಕ ವಿಷಯಗಳು ಹೊರಬರುತ್ತವೆ. ನಂಬಿಕೆಗಳ ಹುಟ್ಟು ವ್ಯಕ್ತಿಯಲ್ಲಾದರೂ ಅವುಗಳ ಬೆಳವಣಿಗೆ ಸಮಷ್ಟಿಯಲ್ಲಿ. ಹೀಗೆ ಸಮಷ್ಟಿಯಾದ ನಂಬಿಕೆಗಳು ಸಾರ್ವಜನಿಕ, ಸಾರ್ವತ್ರಿಕ ಎನಿಸಿಕೊಳ್ಳುತ್ತವೆ. ಇಲ್ಲಿ ಸಾರ್ವತ್ರಿಕ ಎಂದರೆ ಪ್ರಾದೇಶಿಕ ಭಿನ್ನತೆ ಇಲ್ಲಾ ಎಂದರ್ಥವಲ್ಲ. ಒಂದು ಪ್ರಾದೇಶಿಕ ಸಮುದಾಯದ ಒಳಗಡೆ ಎಲ್ಲರಿಗೂ ಅನ್ವಯಿಸುವ, ಎಲ್ಲರೂ ಅನುಸರಿಸುವ ಎಂದರ್ಥ. ನಂಬಿಕೆಗಳ ಉಗಮಕ್ಕೆ ಅನೇಕ ಕಾರಣಗಳಿವೆ, ಪ್ರೇರಣೆಗಳಿವೆ. ಕೆಲವು ನಂಬಿಕೆಗಳಿಗೆ ಅನುಭವ ಕಾರಣವಾಗಬಹುದು ಇನ್ನೂ ಕೆಲವಕ್ಕೆ ಭಯ, ಭಕ್ತಿ, ಕೃತಜ್ಞತೆ, ಮಂಗಳದೃಷ್ಟಿ , ಆರೋಗ್ಯದೃಷ್ಟಿ , ಮುನ್ನೆಚ್ಚರಿಕೆ, ಅನುಕೂಲ ಹೀಗೆ ಅನೇಕ ಕಾರಣಗಳು, ಪ್ರೇರಣೆಗಳಿಂದ ಸಮುದಾಯದಲ್ಲಿ ನಂಬಿಕೆಗಳು ಹುಟ್ಟಿಕೊಂಡು ಬೆಳೆದು ನಿಂತಿವೆ.

**ನಂಬಿಕೆಗಳ ವಿಧಗಳು:** ಪ್ರಾಚೀನ ಮಾನವನ ಪರಿಮಿತ ತಿಳುವಳಿಕೆಯು ಜನಪದ ನಂಬಿಕೆಗಳಿಗೆ ಮೂಲ. ವಸ್ತುಸ್ಥಿತಿಯೊಡನೆ ಅಸಂಬದ್ಧ, ಅವೈಜ್ಞಾನಿಕ ಸಂಬಂಧವನ್ನು ಕಲ್ಪಿಸಿದಾಗ ನಂಬಿಕೆಗಳು ಹುಟ್ಟಿಕೊಳ್ಳುತ್ತವೆ, ತಪ್ಪು ತಿಳುವಳಿಕೆ ಮತ್ತು ಅಜ್ಞಾನದಿಂದ ಹೆಚ್ಚಿನ ನಂಬಿಕೆಗಳು ಜನ್ಮ ತಾಳುತ್ತವೆ ಎಂದು ಅನ್ವಯಿಕ ಜಾನಪದ ಕೃತಿಯಲ್ಲಿ ಡಾ. ಬಿ. ಎ. ವಿವೇಕರೈರವರು ಹೇಳಿದ್ದಾರೆ.[2] ಜನಪದ ನಂಬಿಕೆಗಳನ್ನು ಕುರಿತು ಸಮಗ್ರ, ಅಧ್ಯಯನ ಮಾಡಿ ಜನಪದ ನಂಬಿಕೆಗಳ ಉಗಮವನ್ನು ಆಧರಿಸಿ, ಜನಪದ ನಂಬಿಕೆಗಳನ್ನು ಸ್ಥೂಲವಾಗಿ ಮೂರು ವಿಧವಾಗಿ ಗುರುತಿಸಿದ್ದಾರೆ.

1. ಧಾರ್ಮಿಕ ನಂಬಿಕೆಗಳು
2. ಸಾಂಸ್ಕೃತಿಕ ನಂಬಿಕೆಗಳು
3. ವೈಯಕ್ತಿಕ ನಂಬಿಕೆಗಳು

ಸಾಂಪ್ರದಾಯಿಕವಾಗಿ ಅಂಗೀಕೃತವಾದ ಒಂದು ತಿಳುವಳಿಕೆಯನ್ನು ನಂಬಿಕೆ ಎನ್ನಬಹುದು. ನಂಬಿಕೆಗಳನ್ನು ಜಾನಪದ ವಿದ್ವಾಂಸರು ಜನಪದ ನಂಬಿಕೆಗಳು ಮತ್ತು ಮೂಢನಂಬಿಕೆಗಳು ಎಂದು ವಿಂಗಡಿಸುತ್ತಾರೆ ನಂಬಿಕೆಗಳು ಕಾರ್ಯಕಾರಣ ಸಂಬಂಧದ ಅರಿವಿಲ್ಲದಾಗ ಹುಟ್ಟಿಕೊಂಡಂಥ ಹೇಳಿಕೆಗಳಾಗಿವೆ.

**ಧಾರ್ಮಿಕ ನಂಬಿಕೆಗಳು:** ಈ ನಂಬಿಕೆಗಳನ್ನು ಅತಿಮಾನಷ ನಂಬಿಕೆಗಳು ಎಂದೂ ಕರೆಯಬಹುದು. ಮಾನವನ ಬದುಕಿನಲ್ಲಿ ಭಯ ಮತ್ತು ಅಸ್ಥಿರ ಭಾವನೆಗಳು ಅತಿಮಾನುಷ ನಂಬಿಕೆಗಳಿಗೆ ಮೂಲ. ನಿಸರ್ಗದ ನಡುವೆ ಬದುಕಬೇಕಾದ ಮಾನವ ತನ್ನ ಪರಿಸರದ ಬಗ್ಗೆ ಅಜ್ಞಾನಿ ಆಗಿದ್ದರಿಂದ, ಅಸ್ಥಿರವಾದ ಅವನ ಮನಸ್ಸಿನ ಸಮಾಧಾನಕ್ಕೆ ಈ ಧಾರ್ಮಿಕ

ನಂಬಿಕೆಗಳು ಕಾರಣವಾದವು. ದೇವರು, ದೆವ್ವ ಮುಂತಾದ ಅತಿಮಾನುಷ ಶಕ್ತಿಗಳ ಕಲ್ಪನೆಗಳು ಆತನ ಮನಸ್ಸಿನಲ್ಲಿ ಹುಟ್ಟಿಕೊಂಡವು. ಹಾಗೆಯೇ ಅವುಗಳ ಸ್ವರೂಪ ಕಾರ್ಯಗಳಿಗೆ ಸಂಬಂಧಿಸಿದ ನಂಬಿಕೆಗಳೂ ಕಾಣಿಸಿಕೊಂಡವು. ಕೆಲವೊಮ್ಮೆ ಕಾಲ್ಪನಿಕ ದೇವರುಗಳನ್ನು ವಾಸ್ತವಿಕ ವಸ್ತುಗಳೊಡನೆ ಸಂಬಂಧ ಕಲ್ಪಿಸಿ, ಗೌರವಿಸುವ ನಂಬಿಕೆಗಳೂ ಬಂದವು. ಉದಾ: ತೆಂಗಿನ ಕಾಯಿಯನ್ನು ಕಾಲಿನಿಂದ ಒದೆಯಬಾರದು, ಅದು ಮುಕ್ಕಣ್ಣ ಈಶ್ವರನಿಗೆ ಮೂರು ಕಣ್ಣುಗಳಿವೆ ಎನ್ನುವುದು ಪೌರಾಣಿಕ ಕಲ್ಪನೆ. ತೆಂಗಿನ ಕಾಯಿಯಲ್ಲೂ ಮೂರು ಕಣ್ಣುಗಳು ಇರುವುದರಿಂದ ಅದನ್ನು ಈಶ್ವರನಿಗೆ ಸಮಾನವೆಂದು ಗೌರವಿಸಲಾಗಿದೆ. "ದೇವರ ಹೂವನ್ನು ಮೂಸಬಾರದು" ಎಂಬನಂಬಿಕೆ ಇದೆ. ಇಲ್ಲಿ ಹೂವನ್ನು ಮೂಸುವುದರಿಂದ ಅದರೊಳಗಿನ ಕ್ರಿಮಿಕೀಟಗಳು ಮೂಗಿನೊಳಕ್ಕೆ ಸೇರಿಕೊಂಡು ತೊಂದರೆಯಾಗಬಾರದು ಎನ್ನುವ ಕಾರಣಕ್ಕಾಗಿ ಈ ನಿಷಿದ್ಧತೆಯ ರೂಪದ ನಂಬಿಕೆಯನ್ನು ಸೃಷ್ಟಿಸಿರಬಹುದು.

"ಒಲೆಯನ್ನು ಕಾಲಿನಿಂದ ಒದೆಯಬಾರದು ಲಕ್ಷ್ಮಿಗೆ ಸಮಾನ" ಎಂದು ಜನಪದ ನಂಬಿಕೆಯಿದೆ. ಒಲೆಯನ್ನು ಕಾಲಿಂದ ಒದೆದಾಗ, ಒಲೆಯ ಬೆಂಕಿ, ಕಾಲಿಗೆ ತಾಗಿ ಅಪಾಯ ಸಂಭವಿಸಬಹುದು. ಆದ್ದರಿಂದ ಈ ರೀತಿ ಮಾಡಬಾರದು ಎನ್ನುವುದನ್ನು ಧಾರ್ಮಿಕವಾಗಿ ಒಲೆಯು ಲಕ್ಷ್ಮಿಗೆ ಸಮಾನ ಎಂದು ನಂಬಿಸುವುದರ ಮೂಲಕ ಸಾಧಿಸಲಾಗಿದೆ.[3]

ಭಯ ಮತ್ತು ಭಾವನಾ ಮೂಲವಾದ ಒಂದು ನಂಬಿಕೆಯನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸುವ ಅಥವಾ ಬಲಗೊಳಿಸುವಂತಹದು ನಿಷೇಧ. ಇದನ್ನು ಮಾಡಬಾರದು ಇದು ಕೆಡಕು ಎನ್ನುವ ಸಾಮಾಜಿಕ, ಧಾರ್ಮಿಕ ಪ್ರತಿಬಂದಕವೇ ನಿಷಿದ್ಧ ಎನ್ನಲಾಗುವುದು. ಇಂಗ್ಲಿಷ್ ಟಾಬು ಪದ ಎರಡು ಭಿನ್ನ ಅರ್ಥಗಳನ್ನು ಹೊಂದಿದೆ. ಒಂದು ಪವಿತ್ರ ಅನ್ನುವ ಅರ್ಥವಾದರೆ ಇನ್ನೊಂದು ಮುಖದಲ್ಲಿ ನಿಷೇಧ, ಅಪಾಯ ಎನ್ನುವ ಅರ್ಥಗಳನ್ನು ಹೊಂದಿದೆ. ಮುಟ್ಟಲಾಗದ, ಅರ್ಥೈಸಲಾಗದ ಸಂಗತಿಗಳಿಗೂ ನಿಷೇಧಕ್ಕೂ ಹತ್ತಿರದ ಸಂಬಂಧವಿರುತ್ತದೆ. ಏಕೆಂದರೆ ಹಲವು ಸಂಬಂಧಗಳಲ್ಲಿ ಭಯವೇ ನಿಷೇಧಕ್ಕೆ ಮೂಲವಾಗಿರುತ್ತದೆ. ಯಾವುದೇ ಒಂದು ವಸ್ತು ಅಥವಾ ವ್ಯಕ್ತಿಯಿಂದ ತನಗೆ ಅಪಾಯವಾದೀತು ಎನ್ನುವ ಮನುಷ್ಯನ ಸುಪ್ತ ಮನಸ್ಸಿನ ಪ್ರೇರಣೆಯೇ ನಿಷೇಧದ ಹಿನ್ನೆಲೆಯಲ್ಲಿದೆ ಎಂದು ಮನೋವಿಜ್ಞಾನಿ ಪ್ರಾಯ್ಡ್ ಹೇಳುತ್ತಾನೆ. ಜನಸಮುದಾಯದ ನಂಬಿಕೆಯ ಅಭಿವ್ಯಕ್ತಿ ಹಾಗೂ ವಿವರಣೆಗಳಾದ ನಿಷೇಧಗಳನ್ನು ವೋಟ್ "ಮಾನಸಿಕ ರಕ್ಷಕ" ಎಂದು ಕರೆಯುತ್ತಾನೆ. ನಂಬಿಕೆಯ ಹಿನ್ನೆಲೆಯಲ್ಲಿ ಮೂಡಿ ಬಂದ ನಿಷೇಧಗಳು ಸಾಮಾಜಿಕ ರೀತಿ ರಿವಾಜನ್ನು ರೂಪಿಸುವ ಮತ್ತು ಕಾಪಾಡುವ ಶಕ್ತಿಗಳಾಗಿವೆ.[4]

ಹಬ್ಬ ಮತ್ತು ಜಾತ್ರೆಗಳಲ್ಲಿ, ಪ್ರತಿಯೊಂದು ದೇವರ ಕುರಿತ ಕಥೆಗಳಲ್ಲೂ ಜನಪದದ ಅನೇಕ ನಂಬಿಕೆಗಳಿವೆ. ಭೂತಾಯಿ ಪೂಜೆ, ಸುಗ್ಗಿ ಕುಣಿತ, ಗಿಡಮರಗಳ ಪೂಜೆ, ಸೂರ್ಯನಿಗೆ ಶರಣೆನ್ನುವುದು, ಹರಿವ ನೀರಿಗೆ ಪೂಜೆ, ಮಳೆರಾಯನನ್ನು ಹಾಡಿ ಹೊಗಳುವುದು ಈ ಎಲ್ಲಾ ಬಗೆಯ ಆಚರಣೆಗಳ ಹಿನ್ನೆಲೆಯಲ್ಲಿ ಪ್ರಕೃತಿಯಲ್ಲಿ ದೇವರನ್ನು ಕಾಣುವ ಜನಪದರ ನಂಬಿಕೆಗಳಿವೆ. ತಮ್ಮ ಉಪಯೋಗಕ್ಕೆ ಬರುವ ಪ್ರತಿಯೊಂದು

ವಸ್ತುವೂ ಜನಪದದ ದೃಷ್ಟಿಯಲ್ಲಿ ದೇವರಾಯಿತು. ಮಣ್ಣು, ಕಲ್ಲು, ಮರ, ಸೂರ್ಯ, ಚಂದ್ರ ಎಲ್ಲದರಲ್ಲಿಯೂ ದೇವರನ್ನು ಕಂಡು, ಎಲ್ಲದಕ್ಕೂ ದೇವರೇ ಕಾರಣವೆಂದು ನಂಬಿದರು ಜನಪದರು. ಹಾಗಾಗಿ ಪ್ರತಿಯೊಂದು ಗ್ರಾಮದಲ್ಲೂ ಗುಡಿ ಕಟ್ಟಿ, ತಮ್ಮ ಕಲ್ಪನೆಯ ಪ್ರತೀಕವೆನಿಸಿದ ಮೂರ್ತಿಯೊಂದನ್ನು ಇಟ್ಟು ಪೂಜಿಸುತ್ತಿದ್ದರು, ಅದರಲ್ಲೂ ಒಳಿತನ್ನು ಮಾಡುವ ದೇವತೆಗಳು ಮತ್ತು ಕೆಡಕನ್ನು ಮಾಡುವ ದೈವಗಳೆಂದು ವಿಂಗಡಿಸಿಕೊಂಡಿದ್ದರು. ವರವನ್ನು ಕೊಡುವ ದೇವರು ಅನುಗ್ರಹ ದೇವತೆಗಳೆಂದು, ರೋಗ ಜಿನ ತರುವ ದೇವರುಗಳು ಕ್ಷುದ್ರ ದೇವತೆಗಳೆಂದು ನಂಬಿ ಪೂಜಿಸುತ್ತಿದ್ದರು. ಈ ಹಿನ್ನೆಲೆಯಲ್ಲಿ ಪೂಜೆ, ಹರಕೆ, ಜಾತ್ರೆ, ರಥೋತ್ಸವ ಅಂತಹ ಆಚರಣೆಗಳೆಲ್ಲಾ ಜಾರಿಗೆ ಬಂದವು ಇವೆಲ್ಲಕ್ಕೂ ಮೂಲ ಕಾರಣ ಜನಪದರ ನಂಬಿಕೆಗಳು.

**ಸಾಂಸ್ಕೃತಿಕ ನಂಬಿಕೆಗಳು:** ಜೀವಿಸುವುದಕ್ಕಾಗಿ ಜನಪದ ಕೂಡುತ್ತದೆ. ನಿರಂತರವಾಗಿ ಸಾಗಲು ಜೀವನತತ್ತ್ವವೊಂದನ್ನು ಅಳವಡಿಸಿಕೊಳ್ಳುತ್ತದೆ. ಆ ಒಪ್ಪಿತ ತತ್ವದಂತೆ ಬದುಕುತ್ತದೆ. ಇಂಥ ತಾತ್ವಿಕ ಬದುಕಿನ ಎಲ್ಲಾ ಬಗೆಯ ಉತ್ಪನ್ನವನ್ನು ನಾವು ಸಂಸ್ಕೃತಿ ಎನ್ನುತ್ತೇವೆ. ನಂಬಿಕೆಗಳು ಆಚರಣೆಗಳು, ಪುರಾಣಗಳು ಈ ಸಂಸ್ಕೃತಿಯ ಭಾಗವಾಗಿವೆ. ಜನಪದ ಜೀವನವೇ ಜಾನಪದವಾಗಿ. ಈ ಜೀವನಕ್ಕೆ ಅನೇಕ ನಂಬಿಕೆಗಳು, ಆಚರಣೆಗಳು ಆಸರೆಯಾಗಿ ನಿಂತಿವೆ. ತಿನ್ನುವುದು, ಉಡುವುದು, ವಾಸಿಸುವುದು, ಕೂಡಿ ಹಾಡುವುದು, ಕುಣಿಯುವುದು ಈ ಸಾಮಾನ್ಯ ನಡವಳಿಕೆಗಳೇ ಜಾನಪದವೆಂದು ಡಾ. ಹಿ. ಶಿ. ರಾಮಚಂದ್ರೇಗೌಡ ಅವರು ಹೇಳುತ್ತಾರೆ.[5] ಈ ಬಗೆಯ ಜಾನಪದ ಬದುಕಿನ ಮೂಲ ಸತ್ಯವೇ ಜನಪದ ನಂಬಿಗಳು ಎಂದು ವಿಶ್ಲೇಷಿಸಿದ್ದಾರೆ.

ಜನಪದದ ಸಾಮಾಜಿಕ ಬದುಕಿನ ಅನೇಕ ಆಚರಣೆಗಳ ಹಿನ್ನೆಲೆಗೆ ಅವರ ನಂಬಿಕೆಗಳಿವೆ. ಹುಟ್ಟು, ಮದುವೆ, ಸಾವು ಮುಂತಾದ ಬದುಕಿನ ಹಂತಗಳಿಗೆ ಸಂಬಂಧಿಸಿದಂತೆ ಅನೇಕ ನಂಬಿಕೆಗಳಿವೆ. “ಅಮಾವಾಸ್ಯೆಯ ದಿನ ಹುಟ್ಟಿದ ಮಕ್ಕಳು ಕಳ್ಳರಾಗುತ್ತಾರೆ.” ಅಮಾವಾಸ್ಯೆಯ ದಿನ ಕಾರ್ಗತ್ತಲು ಇರುತ್ತದೆ ಆಗ ಕಳ್ಳರ ಹಾವಳಿ ಜಾಸ್ತಿ ಆದ್ದರಿಂದ ಇಂತಹ ನಂಬಿಕೆ ಹುಟ್ಟಿರಬಹುದು.[6]

“ಉತ್ತರಕ್ಕೆ ತಲೆ ಹಾಕಿ ಮಲಗಬಾರದು” ಎಂಬುದನ್ನು ಭಯ ಮೂಲದ ನಂಬಿಕೆ. ಏಕೆಂದರೆ ತಲೆ ಉತ್ತರದ ಕಡೆಗೂ ಕಾಲು ದಕ್ಷಿಣದ ಕಡೆಗೂ ಬರುವಂತೆ ಸತ್ತ ಹೆಣವನ್ನು ಸಹ ಹೂಳುವುದಿಲ್ಲ. ದಕ್ಷಿಣ ಉತ್ತರಭಿಮುಖವಾಗಿ ತೆಗೆದಿರುವ ಗುಂಡಿಯಲ್ಲಿ (ಸಮಾಧಿಯಲ್ಲಿ) ಹೆಣದ ತಲೆ ದಕ್ಷಿಣಕ್ಕೂ ಕಾಲು ಉತ್ತರಕ್ಕೂ ಬರುವಂತೆಯೇ ಮಲಗಿಸಿ ಮಣ್ಣು ಮುಚ್ಚುತ್ತಾರೆ. ಇದಕ್ಕೆ ಕಾರಣವೆಂದರೆ ಪೌರಾಣಿಕ ಕಥೆಯೊಂದರ ಕಲ್ಪನೆಯಿಂದ ಮೂಡಿದ ಭಯ. ಅದೇನೆಂದರೆ ಪಾರ್ವತಿ ಸ್ನಾನ ಮಾಡುವಾಗ ಕಾವಲಿಗಾಗಿ ಮಾನಸ ಪುತ್ರನನ್ನು ಸೃಷ್ಟಿಸಿದ್ದು, ಈಶ್ವರನನ್ನು ಒಳಗೆ ಬಿಡದ ಆ ಹುಡುಗನ ತಲೆತೆಗೆದದ್ದು, ಪಾರ್ವತಿಯ ಗೋಳಾಟ, ನಂತರ ಶಿವನು ಉತ್ತರಕ್ಕೆ ತಲೆ ಹಾಕಿ ಮಲಗಿರುವ ಯಾವ ಪ್ರಾಣಿ ತಲೆಯನ್ನಾದರೂ ಕಡೆದು ತನ್ನಿ ಎಂದು ಹೇಳಿ ಆನೆಯ ತಲೆಯನ್ನು ಕಡಿದು ತಂದ ಸೇವಕರು, ಅದನ್ನು ಸತ್ತ ಬಾಲಕನ ಮುಂಡಕ್ಕೆ ಜೋಡಿಸಿ, ಬದುಕಿಸಿ ಗಣೇಶನೆಂದ ಹೆಸರಾದದ್ದು. ಈ ಪೌರಾಣಿಕ ಕಥೆಯ

ಹಿನ್ನೆಲೆಯಲ್ಲಿ ಉತ್ತರಕ್ಕೆ ತಲೆ ಹಾಕಿ ಮಲಗಬಾರದೆಂಬ ನಂಬಿಕೆಯಿದೆ.

"ಒಂಟಿ ಬ್ರಾಹ್ಮಣ ಎದುರಾದರೆ ಹೋದ ಕೆಲಸ ಆಗುವುದಿಲ್ಲ." ಹಣ್ಣು ಹಂಪಲಿನ ಮೊದಲಿನ ಕೊನೆಯನ್ನು ಬ್ರಾಹ್ಮಣರಿಗೆ ಕೊಡಬೇಕು ಆದ್ದರಿಂದ ಪುಣ್ಯ ಬರುತ್ತದೆ. ಈ ಬಗೆಯ ನಂಬಿಕೆಗಳು ಸಾಮಾಜಿಕ ಜಾತಿ, ವರ್ಗ ಆಧಾರಿತ ನಂಬಿಕೆಗಳಾಗಿವೆ.

"ಧಾನ್ಯದ ರಾಶಿಯನ್ನು ಅಳೆಯುವಾಗ ಒಂದನ್ನು 'ಒಂದು' ಎಂದು ಹೇಳಬಾರದು 'ಹೆಚ್ಚಲಿ' ಎಂದು ಹೇಳಬೇಕು" ಎಂಬುದು ಮಂಗಳಕರವಾದ ನಂಬಿಕೆ. "ದೀಪ ಆರಿಸು" ಎನ್ನಬಾರದು, ತುಂಬು ಅನ್ನಬೇಕು ಅಥವಾ ದೊಡ್ಡದು ಮಾಡು ಎನ್ನಬೇಕು" ಎಂಬ ನಂಬಿಕೆಯು ಕಲ್ಯಾಣ ದೃಷ್ಟಿಯಿಂದ ಪ್ರೇರಿತವಾಗಿದೆ. ಆರಿಸು, ಇಲ್ಲವಾಗಿಸು, ನಾಶಮಾಡು ಎಂಬ ಅರ್ಥ ಬರುತ್ತದೆ. ಬೆಳಕು ಆರಬಾರದು ಶುಭದ ಸಂಕೇತ. ಆದ್ದರಿಂದ ಆರಿಸು ಎನ್ನುವುದಕ್ಕೆ ಬದಲಾಗಿ ತುಂಬು ಎಂಬ ಮಾತು ಬಳಸುತ್ತಾರೆ.

ಸಂಜೆ ಹೊತ್ತಿನಲ್ಲಿ ಕಸ ಗುಡಿಸಬಾರದು, ಮನೆಯ ಲಕ್ಷ್ಮಿ ಕಾಲ್ ತೆಗೀತಾಳೆ ಎಂಬ ನಂಬಿಕೆಯು ಪ್ರಚಲಿತವಾದದ್ದು ಕತ್ತಲಾದ ನಂತರ ಕಸ ಗುಡಿಸಿದರೂ, ಆಚೆಗೆ ಎಸೆಯಬಾರದು ಎನ್ನುತ್ತಾರೆ. ಏಕೆಂದರೆ ಕಸದೊಟ್ಟಿಗೆ ಮನೆಯ ಒಳಗೆ ಬಿದ್ದಿರಬಹುದಾದ ನಗನಾಣ್ಯವೂ ಕಸದ ತೊಟ್ಟಿ ಸೇರಿಬಿಡುತ್ತದೆ ಎಂಬ ಆಂತಕ ಮತ್ತು ಮುನ್ನೆಚ್ಚರಿಕೆಯಿಂದ ಹೀಗೆ ಮಾಡುತ್ತಿದ್ದರು.

"ಆಷಾಡದಲ್ಲಿ ಅತ್ತೆ-ಅಳಿಯ ಹಾಗೂ ಅತ್ತೆ-ಸೊಸೆ ಒಂದು ಬಾಗಿಲಲ್ಲಿ ಓಡಾಡಬಾರದು" ಎಂಬ ನಂಬಿಕೆಯು ಆಷಾಢದ ಗಾಳಿಯಲ್ಲಿ ಗಂಡು-ಹೆಣ್ಣು ಸೇರಬಾರದೆಂದು ಗಂಡು ಹೊಲ ಗದ್ದೆಯಲ್ಲಿ ದುಡಿದುಕೊಂಡಿರಬೇಕೆಂಬ ವಿಚಾರಗಳಿಂದ ಮೂಡಿದ ನಂಬಿಕೆಯಾಗಿದೆ.

ಖಾಲಿ ಕೊಡ ಅಡ್ಡ ಬರುವುದು, ಬಲಗಾಲಿಟ್ಟು ಒಳಬರುವುದು, ಬಲಗೈಯಲ್ಲೇ ನೀಡುವುದು, ಎಡಗಣ್ಣು ಅದುರುವುದು, ಹಲ್ಲಿ ಲೋಚಗುಟ್ಟುವುದಕ್ಕೋಂದು ಅರ್ಥ ಕಲ್ಪಿಸುವುದು, ಬಲ ಭಾಗದಲ್ಲೇ ಎದ್ದೇಳಬೇಕೆಂಬುದು ಹೀಗೆ ಜೀವನದ ಪ್ರತಿಯೊಂದು ವಿಷಯಗಳಿಗೂ ತಮತಮಗೆ ತೋಚಿದ ಅರ್ಥ ಕಲ್ಪಿಸುತ್ತಾ ನಂಬಿಕೆಯನ್ನು ಬೆಳೆಸಿಕೊಂಡು, ಬಳಸಿಕೊಂಡು ಬಂದು ಅವುಗಳು ತಲೆತಲಾಂತರದಲ್ಲಿ ಸಾಮಾಜಿಕರಣಗೊಂಡು ಎಲ್ಲರೂ ನಂಬಿ ಆಚರಿಸುವ ಪದ್ಧತಿಗಳಾಗಿವೆ.

ಸಾವಿನ ಬಗೆಗೆ ಅನೇಕ ನಂಬಿಗಳಿವೆ. ಒಳ್ಳೆಯ ಸಾವು, ಕೆಟ್ಟ ಸಾವು ಎಂದು ಕರೆಯುತ್ತಾರೆ. ಅಪರಾಪ್ತ ವಯಸ್ಸಿನ ಸಾವು ಹೊಂದಿದ ಜೀವಕ್ಕೆ ತೃಪ್ತಿಯಿಲ್ಲದೆ ಅತೃಪ್ತಿಯಿಂದ ದೆವ್ವ, ಪಿಶಾಚಿಯಾಗಿ ತಿರುಗುತ್ತಿರುತ್ತದೆ ಎಂದೂ ತನಗೆ ಪ್ರಿಯವಾದವರ ಮೇಲೆ ಬರುತ್ತದೆ ಎಂದೂ ನಂಬುತ್ತಾರೆ. ಹೀಗಾಗಿ ದೆವ್ವ, ಪಿಶಾಚಿಗಳ ಕಾಟದ ದೊಡ್ಡ ದೊಡ್ಡ ಕಥೆಗಳನ್ನೇ ಕಟ್ಟಿ ನಂಬಿ, ನಂಬಿಸುತ್ತಾ ಬದುಕಿದ್ದಾರೆ. ಸತ್ತು ದೇವರ ಪಾದ ಸೇರುತ್ತೇವೆ, ಒಳ್ಳೆಯದು ಮಾಡಿದರೆ ಸ್ವರ್ಗಕ್ಕೆ ಇಲ್ಲದಿದ್ದರೆ ನರಕದಲ್ಲಿ ಕುದಿಯುವ ಎಣ್ಣೆ ಒಳಗೆ ಬೇಯಬೇಕೆಂದು ಹೆದರಿ, ಹೆದರಿಸುತ್ತಾ ಸನ್ಮಾರ್ಗದ ದಾರಿಯಲ್ಲಿಯೇ ಬದುಕಬೇಕೆಂದು ಜನಪದರು ನಂಬಿದ್ದರು.

ತೊಟ್ಟಿಲು ಶಾಸ್ತ್ರ, ನಾಮಕರಣ, ಕಳಶವನ್ನು ಲಕ್ಷ್ಮಿ ಎಂದು ನಂಬೋದು; ಮದುವೆ ಶಾಸ್ತ್ರಗಳು, ಚಪ್ಪರಕ್ಕೆ ಪೂಜೆ, ಗಂಗೆಪೂಜೆ ಹೀಗೆ ಅನೇಕ ಆಚರಣೆಗಳ ಹಿಂದೆ ಅನೇಕ ನಂಬಿಕೆಗಳು ಜೀವಂತವಾಗಿದ್ದು ಅವು ಜಾತಿ ಧರ್ಮ ಆಧಾರಿತವಾಗಿದ್ದು ಪರಂಪರೆಯಿಂದ ಪರಂಪರವರೆಗೆ ಸಾಗಿ ಬಂದವುಗಳಾಗಿವೆ. ನಂಬಿಕೆಗಳ ಹುಟ್ಟು ವ್ಯಕ್ತಿಯೊಳಗೆ ಆದರೂ ಅವುಗಳ ಬೆಳವಣಿಗೆ ಸಮಷ್ಟಿಯ ತೊಟ್ಟಿಲಲ್ಲಿ ಆಗಿ ಹಲವರಿಗೆ ಸೇರಿದ ನಂಬಿಕೆ ಸಾರ್ವಜನಿಕ ಎನಿಸಿಕೊಂಡು ಸಾಂಪ್ರದಾಯಿಕವಾಗಿ ಬೆಳೆದು ಬರುತ್ತದೆ. ಆದರೂ ಪ್ರಾದೇಶಿಕ ಭಿನ್ನತೆಗಳಿಂದ ವೈವಿಧ್ಯಮಯವಾದ ವಿಶಿಷ್ಟವಾದ ಪ್ರಾದೇಶಿಕ ನಂಬಿಕೆಗಳನ್ನು ನೋಡಬಹುದು.

**ವೈಯಕ್ತಿಕ ನಂಬಿಕೆಗಳು:** ವೈಯಕ್ತಿಕ ನಂಬಿಕೆಗಳು ವ್ಯಕ್ತಿಯೊಬ್ಬನಿಂದ ಹುಟ್ಟಿ, ಕ್ರಮೇಣ ಒಂದು ಸಮಾಜ ಅದನ್ನು ಅನುಕರಿಸಿದಾಗ ಅದು ಸಾಂಸ್ಕೃತಿಕ ನಂಬಿಕೆಯಲ್ಲಿ ಸೇರಿ ಹೋಗುತ್ತದೆ. ಆದರೆ ಇನ್ನೂ ಅನೇಕ ನಂಬಿಕೆಗಳು ವ್ಯಕ್ತಿಯೊಬ್ಬನಿಗೆ ಮಾತ್ರ ಸಂಬಂಧಿಸಿಯು ಇರುತ್ತವೆ. ಒಬ್ಬನು ಧರಿಸಿದ ಯಾವುದೇ ಒಂದು ಬಟ್ಟೆಯಿಂದ ಉಂಗುರದಿಂದ ಆಕಸ್ಮಿಕವಾಗಿ ಅವನಿಗೆ ಹಣ ಅಥವಾ ಬಯಸಿದ ಹೆಣ್ಣು ಸಿಕ್ಕಿದರೆ ಮುಂದೆ ಅಂತ ವಸ್ತುಗಳೇ ತನ್ನ ಅದೃಷ್ಟಕ್ಕೆ ಕಾರಣ ಎಂದು ನಂಬುತ್ತಾ ಹೋಗಬಹುದು. ಒಬ್ಬ ವ್ಯಕ್ತಿಗೆ ಯಾವುದೋ ಒಂದು ವಾರದಲ್ಲಿ ಅನುಕೂಲವಾಗಬಹುದು. ಆಮೇಲೆ ಅವನು ಯಾವಾಗಲೂ ತನಗೆ ಆ ವಾರ ಅದೃಷ್ಟದ ವಾರ ಎಂದು ನಂಬುತ್ತಾನೆ. ಮಂಗಳವಾರ ಕೆಟ್ಟ ದಿನ ಯಾವ ಒಳ್ಳೆಯ ಕೆಲಸವನ್ನು ಮಾಡಬಾರದು ಎನ್ನುವ ನಂಬಿಕೆಗೆ ನಮ್ಮಲ್ಲಿದೆ. ಕೆಲವರು ಮಾತ್ರ ಮಂಗಳವಾರವೇ ನನಗೆ ಶುಭದಿನ ಆ ದಿನ ಏನೇ ಕೆಲಸ ಮಾಡಿದರೂ ಕೈಗೊಳ್ಳುತ್ತದೆ ಎಂದು ನಂಬುತ್ತಾರೆ. ಜ್ಯೋತಿಷ್ಯ ಜಾತಕ ಶಕುನ ಭವಿಷ್ಯ ಮುಂತಾದವುಗಳ ಬಗ್ಗೆ ವಯಕ್ತಿಕ ನಂಬಿಕೆಗಳಿವೆ ಬೆಸಸಂಖ್ಯೆ 3, 5, 7 ಶುಭವಲ್ಲವೆಂದು ಸಮಸಂಖ್ಯೆ 2, 4, 6 ಶುಭವೆಂದು ನಂಬುವವರು ಕೆಲವರಾದರೆ, ಮತ್ತೆ ಕೆಲವರಿಗೆ 3, 5 ಬೆಸ ಸಂಖ್ಯೆಯೇ ಅದೃಷ್ಟ ತರುತ್ತೇವೆ ಎಂಬ ನಂಬಿಕೆ ಇದೆ. ಸಂಖ್ಯೆ, ಬಣ್ಣ, ವಾರದ ವಿಷಯದಲ್ಲಿ ಸಾಮಾಜಿಕವಾಗಿ ಎಲ್ಲರೂ ನಂಬುವಂತಹ ನಂಬಿಕೆಗಳು ಇದ್ದೂ ವಯಕ್ತಿಕವಾಗಿ ಭಿನ್ನ-ಭಿನ್ನವಾದ ನಂಬಿಕೆಗಳು ಇವೆ. ಕೆಲವರಿಗೆ ಕಪ್ಪು ಬಣ್ಣ ನಿಷೇಧವಾದರೆ ಮತ್ತೆ ಕೆಲವರಿಗೆ ಅದೇ ಪ್ರಿಯವಾದದ್ದು.

ನಂಬಿಕೆಗಳನ್ನು ಈ ಮೇಲಿನಂತೆ ಹಲವಾರು ರೀತಿಯಲ್ಲಿ ವರ್ಗೀಕರಿಸಬಹುದು. ಆದರೆ ಯಾವುದೇ ವರ್ಗೀಕರಣ ಸಮರ್ಪಕ ಎಂದು ತೋರುವುದಿಲ್ಲ. ಸಾಮಾಜಿಕ, ಧಾರ್ಮಿಕ, ಪ್ರಾಕೃತಿಕ, ಮನುಷ್ಯ, ಅತಿಮಾನುಷ, ವೈಯಕ್ತಿಕ ಹೀಗೆ ಭಿನ್ನ ನೆಲೆಗಳಲ್ಲಿ ವಿಂಗಡಿಸಿದ್ದರೂ ಇವುಗಳ ಗುಂಪಿಗೆ ಸೇರದೆಯೇ ಉಳಿದುಬಿಡುವ ಅನೇಕ ನಂಬಿಕೆಗಳು ಇವೆ. ಆದ್ದರಿಂದ ವರ್ಗೀಕರಣ ಅಷ್ಟು ಸುಲಭವಲ್ಲ ಕನ್ನಡದಲ್ಲಿ ಪ್ರಾದೇಶಿಕ ನೆಲೆಯಲ್ಲಿ ನಂಬಿಕೆಗಳನ್ನು ಕಲೆ ಹಾಕಿರುವ ಪ್ರಯತ್ನಗಳಾಗಿವೆ. ಜಾನಪದ ಅಧ್ಯಯನ ಭಾಗವಾಗಿಯೇ ಜನಪದದ ನಂಬಿಕೆಗಳು ಮತ್ತು ಆಚರಣೆಗಳ ಕುರಿತ ಅಧ್ಯಯನಗಳು ನಡೆಯುತ್ತಿವೆ. ಈ ಹಿನ್ನೆಲೆಯಲ್ಲಿ ನಂಬಿಕೆಗಳನ್ನು ಮೂಡನಂಬಿಕೆಗಳೆಂದು. ವೈಚಾರಿಕ ನಂಬಿಕೆಗಳೆಂದು ಅಧ್ಯಯನದ ಮೂಲಕ ವಿಂಗಡಿಸಿ ನಂಬಿಕೆಗಳ ಸ್ವರೂಪವನ್ನು ತಿಳಿಸುವ ಪ್ರಯತ್ನಗಳು ನಡೆಯುತ್ತಿವೆ.

ನಂಬಿಕೆಗಳ ಸಹಾಯವಿಲ್ಲದೆ ಬದುಕುವ ಮಾನಸಿಕ ಗಟ್ಟಿತನ ಎಲ್ಲರಿಗೂ ಸಾಧ್ಯವಾಗಲಾರದು. ಅನೇಕರು ಬದುಕುವ ಪರಿಸರ ಅವರ ತಿಳುವಳಿಕೆಯ ಇತಿಮಿತಿ ಮುಂತಾದ ಸಂಗತಿಗಳು ಅವರ ಬದುಕಿನಲ್ಲಿ ಕೆಲವಾದರೂ ನಂಬಿಕೆಗಳನ್ನು ಅವಲಂಬಿಸಲೂ ಕಾರಣವಾಗಬಹುದು. ಆದರೆ ಮನುಷ್ಯನ ಹಾಗೂ ಅವನು ಬದುಕುತ್ತಿರುವ ಸಮಾಜಕ್ಕೆ ಅಪಾಯಕಾರಿಯಾದ ಅನೇಕ ಧಾರ್ಮಿಕ ನಂಬಿಕೆಗಳು ಜಾತಿ, ಅಸ್ಪೃಶ್ಯತೆ, ಗಂಡುಹೆಣ್ಣಿನ ಅಂತರ ಮುಂತಾದ ಸಾಮಾಜಿಕ ಅಸಮಾನತೆಗಳನ್ನು ಘೋಷಿಸುವ ಸಾಂಸ್ಕೃತಿಕ ನಂಬಿಕೆಗಳು ವ್ಯಕ್ತಿಯ ಮನಸ್ಸಿನಲ್ಲಿ ಸದಾ ಭಯದ ಅಸ್ಥಿರತೆಯ ವಾತಾವರಣವನ್ನು ಉಂಟುಮಾಡುವ ವೈಯಕ್ತಿಕ ನಂಬಿಕೆಗಳು. ಇವನ್ನು ಸಂಪೂರ್ಣವಾಗಿ ತೊಡೆದು ಹಾಕುವುದು ಅನ್ವಯಿಕ ಜಾನಪದದ ಉದ್ದೇಶವಾಗಿದೆಯೆಂದು ಡಾ. ಬಿ. ಎ. ವಿವೇಕ ರೈ[7] ಹೇಳಿದ್ದಾರೆ.

ಯಾವುದೇ ನಂಬಿಕೆಗಳ ಸಾಂಸ್ಕೃತಿಕ ಅಂಶ ಅನಂಥವಾದದ್ದು, ಪ್ರಮುಖವಾಗಿ ಪರಿಗಣಿಸಬೇಕಾದದ್ದು. ಆದ್ದರಿಂದ ಕನ್ನಡ ನಂಬಿಕೆಗಳ ಸಾಂಸ್ಕೃತಿಕ ಅಂಶದ ವಿವೇಚನೆ ಅಗತ್ಯವಾಗಿ ನಡೆಯಬೇಕಾಗಿದೆ ಎಂದು ಹೇಳಿರುವ ಜಿ. ಶಂ. ಪರಮಶಿವಯ್ಯನವರು ನಂಬಿಕೆಗಳು ಅವುಗಳ ಅಧ್ಯಯನವು ಪರೋಕ್ಷವಾಗಿ ಸಂಸ್ಕೃತಿಯ ಅಧ್ಯಯನವಾಗುತ್ತದೆ[8] ಎಂದು ನಂಬಿಕೆಗಳ ಮಹತ್ವವನ್ನು ಕುರಿತು ಚಿಂತಿಸಿದ್ದಾರೆ.

**ಉಪಸಂಹಾರ:** ಜನವಾಣಿ ಬೇರು, ಕವಿವಾಣಿ ಹೂವು ಎಂಬಂತೆ ಜನಪದ ನಂಬಿಕೆ, ಆಚರಣೆ, ಪರಂಪರೆಗಳ ಆಗರವಾಗಿ ನಮ್ಮ ಸಂಸ್ಕೃತಿ ಬೆಳೆಯುತ್ತಾ ಬಂದಿದೆ. ಅಪ್ರಜ್ಞಾಪೂರ್ವಕವಾಗಿ ನಮ್ಮ ವರ್ತನೆಗಳಲ್ಲಿ, ಆಚರಣೆಗಳಲ್ಲಿ ಆಸು ಹೊಕ್ಕಾಗಿದೆ. ನಂಬಿಕೆಗಳಿಗೆ ದೇಶವಿಲ್ಲ, ಭಾಷೆ ಇಲ್ಲ. ಅವು ಬದುಕಿನ ಉದ್ದಕ್ಕೂ ಹರಡಿಕೊಂಡಿವೆ. ನಮ್ಮ ನಾಗರೀಕತೆ ಬೆಳೆದು ಬಂದಂತೆಲ್ಲಾ ಜಾನಪದ ನಂಬಿಕೆಗಳು ಸಡಿಲಗೊಳ್ಳುತ್ತಿವೆ, ಬದಲಾಗುತ್ತಿವೆ. ಅನೇಕ ಮೌಲ್ಯಯುತ ಸಾಮಾಜಿಕ ಧಾರ್ಮಿಕ ಮತ್ತು ಪ್ರಾಕೃತಿಕ ನಂಬಿಕೆಗಳ ಬೇರುಗಳು ಇನ್ನೂ ಆಳವಾಗಿವೆ. ವಿವೇಕಪೂರ್ವಕವಾಗಿ ಆಚರಣೆಗಳಲ್ಲಿ ತೊಡಗುವ ಇಂದಿನ ಯುವ ಜನತೆಯು ಕೂಡ ಜಾನಪದ ನಂಬಿಕೆಗಳನ್ನು ಸಂಪೂರ್ಣವಾಗಿ ನಿರ್ಲಕ್ಷಿಸದೆ ಕಾಲಕ್ಕೆ ತಕ್ಕಂತೆ ಕೆಲವೊಂದು ಬದಲಾವಣೆಗಳೊಂದಿಗೆ ಒಪ್ಪಿ, ನಂಬಿ, ಆಚರಿಸುತ್ತಿರುವುದೇ ಜಾನಪದ ನಂಬಿಕೆಗಳ ಮಹತ್ವವನ್ನು ಕಾಣಿಸುತ್ತದೆ.

## ಕೊನೆ ಟಿಪ್ಪಣಿಗಳು:

1. ಲಿಂಗಯ್ಯ ಡಿ. & ಸಂಧ್ಯಾ ರೆಡ್ಡಿ ಕೆ. ಆರ್. (2006). ಜಾನಪದ ಸ್ವರೂಪ ಮತ್ತು ಸಾಹಿತ್ಯ ಸಂಪಾದಕರು. ಕನ್ನಡ ಸಾಹಿತ್ಯ ಪರಿಷತ್ತು. ಬೆಂಗಳೂರು. ಪು.ಸಂ. 1
2. ವಿವೇಕ ರೈ ಬಿ. ಎ. (1995). ಅನ್ವಯಿಕ ಜಾನಪದ. ಕನ್ನಡ ಪುಸ್ತಕ ಪ್ರಾಧಿಕಾರ. ಬೆಂಗಳೂರು. ಪು.ಸಂ. 1
3. ವಿವೇಕ ರೈ ಬಿ. ಎ. (1995). ಅನ್ವಯಿಕ ಜಾನಪದ. ಕನ್ನಡ ಪುಸ್ತಕ ಪ್ರಾಧಿಕಾರ. ಬೆಂಗಳೂರು. ಪು.ಸಂ. 5
4. ಲಕ್ಕಪ್ಪ ಗೌಡ ಎಚ್. ಜೆ. (ಪ್ರ.ಸಂ.). (1997). ಜಾನಪದ ಕೈಪಿಡಿ. ಕನ್ನಡ ಪುಸ್ತಕ ಪ್ರಾಧಿಕಾರ. ಬೆಂಗಳೂರು. ಪು.ಸಂ. 289

5. ರಾಮಚಂದ್ರೇಗೌಡ ಹಿ. ಶಿ. (ಸಂ). (2004). ಜಾನಪದ ಗ್ರಹಿಕೆ, ಪರಿಕಲ್ಪನೆ. ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ. ಬೆಂಗಳೂರು. ಪು.ಸಂ. 137-138
6. ವಿವೇಕ ರೈ ಬಿ. ಎ. (1995). ಅನ್ವಯಿಕ ಜಾನಪದ. ಕನ್ನಡ ಪುಸ್ತಕ ಪ್ರಾಧಿಕಾರ. ಬೆಂಗಳೂರು. ಪು.ಸಂ. 7
7. ವಿವೇಕ ರೈ ಬಿ. ಎ. (1995). ಅನ್ವಯಿಕ ಜಾನಪದ. ಕನ್ನಡ ಪುಸ್ತಕ ಪ್ರಾಧಿಕಾರ. ಬೆಂಗಳೂರು. ಪು.ಸಂ. 11
8. ಪರಮಶಿವಯ್ಯ ಜಿ. ಶಂ. (1982). ಕರ್ನಾಟಕ ಜಾನಪದ ಸಮೀಕ್ಷೆ. ಪ್ರಥಮ ವಿಶ್ವಕನ್ನಡ ಸಮ್ಮೇಳನ ಸಾಹಿತ್ಯ ಮಾಲೆ, ಕರ್ನಾಟಕ ಸರ್ಕಾರ. ಬೆಂಗಳೂರು. ಪು.ಸಂ. 282

## ಪರಾಮರ್ಶನ ಗ್ರಂಥಗಳು:

1. ಲಕ್ಕಪ್ಪ ಗೌಡ ಎಚ್. ಜೆ. (ಪ್ರ.ಸಂ.). (1997). ಜಾನಪದ ಕೈಪಿಡಿ. ಕನ್ನಡ ಪುಸ್ತಕ ಪ್ರಾಧಿಕಾರ. ಬೆಂಗಳೂರು.
2. ಪರಮಶಿವಯ್ಯ ಜಿ. ಶಂ. (1982). ಕರ್ನಾಟಕ ಜಾನಪದ ಸಮೀಕ್ಷೆ. ಪ್ರಥಮ ವಿಶ್ವಕನ್ನಡ ಸಮ್ಮೇಳನ ಸಾಹಿತ್ಯ ಮಾಲೆ, ಕರ್ನಾಟಕ ಸರ್ಕಾರ. ಬೆಂಗಳೂರು.
3. ವಿವೇಕ ರೈ ಬಿ. ಎ. (1995). ಅನ್ವಯಿಕ ಜಾನಪದ. ಕನ್ನಡ ಪುಸ್ತಕ ಪ್ರಾಧಿಕಾರ. ಬೆಂಗಳೂರು.
4. ಲಿಂಗಯ್ಯ ಡಿ. & ಸಂಧ್ಯಾ ರೆಡ್ಡಿ ಕೆ. ಆರ್. (2006). ಜಾನಪದ ಸ್ವರೂಪ ಮತ್ತು ಸಾಹಿತ್ಯ ಸಂಪಾದಕರು. ಕನ್ನಡ ಸಾಹಿತ್ಯ ಪರಿಷತ್ತು. ಬೆಂಗಳೂರು.
5. ರಾಮಚಂದ್ರೇಗೌಡ ಹಿ. ಶಿ. (ಸಂ). (2004). ಜಾನಪದ ಗ್ರಹಿಕೆ, ಪರಿಕಲ್ಪನೆ. ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ. ಬೆಂಗಳೂರು.
6. ರಾಮಚಂದ್ರೇಗೌಡ ಹಿ. ಶಿ. (1997). ಜಾನಪದ ಸಾಂಸ್ಕೃತಿಕ ಆಯಾಮಗಳು. ಕನ್ನಡ ಪುಸ್ತಕ ಪ್ರಾಧಿಕಾರ. ಬೆಂಗಳೂರು.
7. ಹಿರೇಮಠ ಎಸ್. ಎಸ್. (2005). ಜನಪದ ಸಮಾಜ ಸಂಸ್ಕೃತಿ. ಸೂರ್ಯ ಪ್ರಕಾಶನ. ಚಿತ್ರದುರ್ಗ ಜಿಲ್ಲೆ.
8. ಸಿ.ಪಿ.ಕೆ. (1969). ಜಾನಪದ ಪ್ರತಿಭೆ. ತ.ವೆಂ. ಸ್ಮಾರಕ ಗ್ರಂಥಮಾಲೆ. ಮೈಸೂರು.

**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.

**About the License:**

© The Authors 2024. The text of this article is open access and licensed under a Creative Commons Attribution 4.0 International License.